ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
GULBARGA ELECTRICTY SUPPLY COMPANY LIMITED
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಜೆಸ್ಕಾಂ
ಯಲಬುರ್ಗಾ.
Tel No:08534-220607/220137
Assistant Executive Engineer (Ele)
O & M Sub-division, GESCOM Yelburga
E-mail ID: aeeyelburga@gmail.com

ಸಕಾನಿಅ(ವಿ)/ಸಅಂ(ತಾಂ)/ಹಿಸ/ಯಲ/19-20/ 3686-96 Date: 7/11/19

## ದಿನಾಂಕ:-19.10.2019 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆಯ ನಡುವಳಿಗಳು

* * *

ದಿನಾಂಕ:-19.10.2019 ರಂದು ಮಧ್ಯಾಹ್ನ 3.00 ಕ್ಕೆ ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ. ಯಲಬುರ್ಗಾ ಕಛೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಶ್ರೀ ಎಮ್ ಎಸ್ ಪತ್ತಾರ, ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಜೆಸ್ಕಾಂ, ಕೊಪ್ಪಳ ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ನಡೆಸಲಾಯಿತ್ತು, ಸದರಿ ಸಭೆಯ ನಡವಳಿಗಳು.

**ಉಪಸ್ಥಿತರು: ಹಾಜರಿಯ ಪುಸ್ತಕದಂತೆ:**

1. ಶ್ರೀ ಯಮನಪ್ಪ ಮಾಟರಂಗಿ — ಸಾ:-ಮಂಡಲಮರಿ
2. ಶ್ರೀ ಕಲ್ಲಪ್ಪ ಕುರಿ — ಸಾ:-ಮಂಡಲಮರಿ
3. ಶ್ರೀ ಕಳಕನಗೌಡ ತೊಂಡಿಹಾಳ — ಸಾ:-ಚಿಕ್ಕಮ್ಯಾಗೇರಿ
4. ಶ್ರೀ ಮುದಿಯಪ್ಪ ಮೇಟಿ — ಸಾ:-ತರಲಕಟ್ಟಿ
5. ಶ್ರೀ ಬಸವರಾಜ ಗಡಾದ — ಸಾ:-ಯಲಬುರ್ಗಾ
6. ಶ್ರೀ ಸುರೇಶ ರಾಠೋಡ — ಸಾ:-ಕುಕನೂರ
7. ಶ್ರೀ ರಾಚಯ್ಯ ವೀರಯ್ಯ ಹಿರೇಮಠ — ಸಾ:-ಕುಕನೂರ
8. ಶ್ರೀ ಕೊಟ್ರೆಪ್ಪ ಶಂಕ್ರಪ್ಪ — ಸಾ:-ಕುಕನೂರ

**ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಗು.ವಿ.ಸ.ಕಂ.ನಿ., ಯಲಬುರ್ಗಾ ಅಧಿಕಾರಿ/ನೌಕರರು:**

1. ಶ್ರೀ ಎಮ್ ಎಸ್ ಪತ್ತಾರ, ಕಾರ್ಯನಿರ್ವಾಹಕ ಅಭಿಯಂತರರು(ವಿ),ಜೆಸ್ಕಾಂ,ಕೊಪ್ಪಳ
2. ಶ್ರೀ ಮಹಮ್ಮದ ಕಲೀಮುದ್ದೀನ್ ಅಹ್ಮದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
3. ಶ್ರೀ ಅಮರೇಶ ರಡ್ಡಿ, ಶಾಖಾಧಿಕಾರಿ, ಜೆಸ್ಕಾಂ ಯಲಬುರ್ಗಾ
4. ಶ್ರೀ ಮೌಲಸಾಬ್ ಶಾಖಾಧಿಕಾರಿ, ಜೆಸ್ಕಾಂ, ವಜ್ರಬಂಡಿ
5. ಶ್ರೀ ಗಿರೀಶ ಎಮ್, ಶಾಖಾಧಿಕಾರಿ, ಜೆಸ್ಕಾಂ ಕುಕನೂರ
6. ಶ್ರೀ ಉಪೇಂದ್ರ , ಶಾಖಾಧಿಕಾರಿ, ಜೆಸ್ಕಾಂ, ಇಟಗಿ/ತಳಕಲ್ಲ್
7. ಶ್ರೀ ಪ್ರಸಾದ್ ಶಾಖಾಧಿಕಾರಿ, ಜೆಸ್ಕಾಂ, ಹಿರೇವಂಕಲಕುಂಟಾ
8. ಶ್ರೀ ರವಿ, ಹಿರಿಯ ಸಹಾಯಕರು, ಜೆಸ್ಕಾಂ ಯಲಬುರ್ಗಾ.



Scanned by CamScanner

ಶ್ರೀ ಎಮ್ ಎಸ್ ಪತ್ತಾರ, ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಜೆಸ್ಕಾಂ, ಕೊಪ್ಪಳ ಇವರು ಸಭೆಯಲ್ಲಿ ಹಾಜರಾಗಿದ್ದ ಗ್ರಾಹಕರು ಹಾಗೂ ಅಧಿಕಾರಿ/ನೌಕರರನ್ನು ಸಭೆಗೆ ಸ್ವಾಗತಿಸಿದರು. ವಿದ್ಯುತ್ ಬಿಲ್ ಕುರಿತಾದ ದೂರುಗಳ ಇತ್ಯರ್ಥ ಹಾಗೂ ಇತ್ಯರ್ಥವಾಗದೇ ಉಳಿದ ಇತರೆ ವಿದ್ಯುತ್ ಸಮಸ್ಯೆಗಳ ಮತ್ತು ಗ್ರಾಹಕರ ಕುಂದು ಕೊರತೆಗಳನ್ನು ಕುರಿತು ಚರ್ಚಿಸಲು ಮತ್ತು ಅವುಗಳಿಗೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಸಲುವಾಗಿ ಪ್ರತಿ ತಿಂಗಳು ಗ್ರಾಹಕರ ಸಭೆ ನಡೆಸಿ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಈ ಸಭೆಯಲ್ಲಿ ಗ್ರಾಹಕರು ವಿದ್ಯುತ್‌ಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಿಳಿಸುತ್ತಾ, ಸಭೆಯ ಉದ್ದೇಶದ ಕುರಿತಾಗಿ ಸಭೆಯಲ್ಲಿ ವಿವರಿಸಿದರು.

<u>**ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳು:**</u>

1. ಶ್ರೀ ಯಮನಪ್ಪ ಮಾಟರಂಗಿ, ಶ್ರೀ ಕಲ್ಲಪ್ಪ ಕುರಿ ಸಾ:-ಮಂಡಲಮರಿ ಇವರು ಮಂಡಲಮರಿ ಗ್ರಾಮದ ತಮ್ಮ ಸ್ಥಾವರ ಸಂಖ್ಯೆ:-MMLP-31873 ದ ನಿಗದಿತ ಶುಲ್ಕ ಹೆಚ್ಚು ಬರುತ್ತದೆ, ಸದರಿ ಶುಲ್ಕವನ್ನು ಕಡಿಮೆ ಮಾಡಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು, ಇವರು ಶಾಖಾಧಿಕಾರಿ, ಜೆಸ್ಕಾಂ, ವಜ್ರಬಂಡಿ ಇವರಿಗೆ ಸ್ಥಳ ಪರಿಶೀಲಿಸಿ ವಿವರವಾದ ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ, ವರದಿ ಬಂದ ನಂತರ ಮುಂದಿನ ಕ್ರಮ ತೆಗದುಕೊಳ್ಳಲಾಗವದು ಎಂದು ತಿಳಿಸಿದ್ದರು.

2. ಶ್ರೀ ಕಳಕನಗೌಡ ಸಾ:-ತೊಂಡಿಹಾಳ ಇವರು ತೊಂಡಿಹಾಳ ಗ್ರಾಮದ ತಮ್ಮ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು ಉಪ-ವಿಭಾಗ ಕಛೇರಿಯಲ್ಲಿ ಅರ್ಜಿ ನೊಂದಾಯಿಸಿ ಗ್ರಾಮ ಪಂಚಾಯತಿಯಿಂದ ಆಧಾರ ಕಾರ್ಡ, ಖಾತಾ ಉತ್ತಾರ, ನಿರಾಕ್ಷೇಪಣಾ ಪ್ರಮಾಣ ಪತ್ರ ಸಲ್ಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗವದು ಎಂದು ಸೂಚಿಸಿರುತ್ತಾರೆ,

3. ಶ್ರೀ ಮುದಿಯಪ್ಪ ಮೇಟಿ ಸಾ:-ತರಲಕಟ್ಟಿ ಇವರು ತರಲಕಟ್ಟಿ ಗ್ರಾಮದಲ್ಲಿ ತಮ್ಮ ಜಮೀನಿಗೆ ಹೆಚ್ಚುವರಿ ವಿದ್ಯುತ್ ಸಂಪರ್ಕ ನೀಡಬೇಕೆಂದು ಕೋರಿರುತ್ತಾರೆ, ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು, ಇವರು ಶಾಖಾಧಿಕಾರಿ, ಜೆಸ್ಕಾಂ, ಹಿರೇವಂಕಲಕುಂಟಾ ಇವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿರುತ್ತಾರೆ, ವರದಿಯ ಆಧಾರೆದ ಮೇಲೆ ಮುಂದಿನ ಕ್ರಮ ತೆಗದುಕೊಳ್ಳಲಾಗವದು ಎಂದು ತಿಳಿಸಿರುತ್ತಾರೆ,



Scanned by CamScanner

4. ಶ್ರೀ ಸುರೇಶ ರಾಠೋಡ, ಶ್ರೀ ಶಂಕ್ರಪ್ಪ ಶ್ರೀ ವೀರಯ್ಯ ಹಿರೇಮಠ, ಸಾ:-ಕುಕನೂರ ಇವರು ಕುಕನೂರ ನಗರದ ಆರ್ಯೋಗ್ಯ ಕಾಲೋನಿಯಲ್ಲಿರುವ ಲೇಔಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರು, ಇವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಇವರಿಗೆ ಹಾಗೂ ಶಾಖಾಧಿಕಾರಿ, ಜೆಸ್ಕಾಂ, ಕುಕನೂರ ಇವರಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಾಮನುಸಾರ ಕ್ರಮ ಕೈಗೆಕೊಳ್ಳುವಂತೆ ಸೂಚಿಸಿರುತ್ತಾರೆ.

ಮೇಲ್ಕಾಣಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸಿದ ನಂತರ ಎಲ್ಲಾ ಗ್ರಾಹಕರಿಗೆ ಮೇಲೆ ತಿಳಿಸಿದ ಎಲ್ಲಾ ಸಮಸ್ಸೆಗಳಿಗೆ ಕಂಪನಿಯ ನಿಯಾಮವಳಿನುಸಾರ ಮುಂಜೂರಾತಿ ಪಡೆದುಕೊಂಡು ಅತೀ ಶೀಘ್ರದಲ್ಲಿ ಕೆಲಸಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವದು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿರುತ್ತಾರೆ.

ಸದರಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತ್ತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ ವಿಭಾಗ,
ಗು.ವಿ.ಸ.ಕಂ.ನಿ.ಯಲಬುರ್ಗಾ

ಪ್ರತಿಗಳನ್ನು ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1.ಮಾನ್ಯ ಮುಖ್ಯ ಅಭಿಯಂತರರು(ವಿ), ಬಳ್ಳಾರಿ ವಲಯ, ಗು.ವಿ.ಸ.ಕಂ.ನಿ., ಬಳ್ಳಾರಿ.
2.ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ವೃತ್ತ, ಗು.ವಿ.ಸ.ಕಂ.ನಿ., ಮುನಿರಾಬಾದ್.
3.ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ವಿಭಾಗ,
ಗು.ವಿ.ಸ.ಕಂ.ನಿ.ಕೊಪ್ಪಳ.

ಪ್ರತಿಯನ್ನು
1.ಶಾಖಾಧಿಕಾರಿಗಳು,ಜೆಸ್ಕಾಂ,ಯಲಬುರ್ಗಾ/ಹಿರೇವಂಕಲಕುಂಟಾ/ಕುಕನೂರ/ಕುದ್ರಿಮೋತಿ/ತಳಕಲ್/ಇಟಗಿ/ವಜ್ರಬಂಡಿ
2. ಸಅ(ತಾಂ)/ಆರ್.ಸಿ.ಎಮ್.ಎಫ್. ಕಡತಕ್ಕೆ

Scanned by CamScanner